ಅ. ಉತ್ತಮ ಕಿವಿಯಚ್ಚುಗಳು ಎಂದರೆ:

1. ಭದ್ರವಾಗಿ ಕೂರಿಸಲು ಕಾಗದದ ಚೂರು, ಹತ್ತಿ ಅಥವಾ ಬೇರಾವುದನ್ನೂ ಬಳಸುವ ಅಗತ್ಯವಿರುವುದಿಲ್ಲ.
2. ಕೀರಲು ಧ್ವನಿ ಬರುವುದಿಲ್ಲ.
3. ಕಿವಿಯಚ್ಚು ಧರಿಸಿದಾಗ ಹಿತವಾಗಿರುತ್ತದೆ.
4. ಸಹಜ ಮುಖ ಚಲನೆಗಳಲ್ಲಿ ಅಡ್ಡಿಯಾಗುವುದಿಲ್ಲ.

ಆ. ಕಿವಿಯಲ್ಲಿ ಅಚ್ಚು ಸರಿಯಾಗಿ ಕೂರದಿದ್ದರೆ ಕೆಳಗಿನ ತೊಂದರೆಗಳುಂಟಾಗಬಹುದು:

1. ರಿಸೀವರ್ ಕೆಳಗೆ ಬೀಳುವುದು.
2. ಶಬ್ದವು ಸರಿಯಾಗಿ ಕಿವಿಯೊಳಗೆ ಹೋಗದಿರುವುದು.
3. ಕರ್ಕಶ ಶಬ್ದ ಬರುವುದು / ಕೀರಲು ಶಬ್ದ ಬರುವುದು.
4. ಕಿವಿಯಚ್ಚು ಧರಿಸಿದಾಗ ಅಹಿತಕರವಾಗುವುದು.
5. ಸರಿಯಾಗಿ ಕೂರದ ಕಿವಿಯಚ್ಚಿನ ಉಜ್ಜುವಿಕೆಯಿಂದ ಕಿವಿಯ ನಾಳದಲ್ಲಿ ಹುಣ್ಣಾಗುವುದು.

ಈ ರೀತಿಯಾಗಿ ಕಿವಿಯಚ್ಚು ಶ್ರವಣೋಪಕರಣದೊಂದಿಗೆ ಬೇಕಾಗುವ ಒಂದು ಮುಖ್ಯವಾದ ಸಹಾಯಕ ಸಾಧನ. ಶ್ರವಣೋಪಕರಣದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಅಳತೆ ತೆಗೆದು ತಯಾರಿಸಲ್ಪಟ್ಟ ಕಿವಿಯಚ್ಚು ಅತ್ಯವಶ್ಯಕ.

ನಿಮ್ಮ ಯಾವುದೇ ಅನುಮಾನ ಅಥವಾ ಪ್ರಶ್ನೆಗಳಿದ್ದರೆ, ಈ ಕೆಳಕಂಡ ವಿಳಾಸವನ್ನು ಸಂಪರ್ಕಿಸಿರಿ:


ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ
ಶ್ರವಣ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ ಸಂ**: 0821–2502000, 2502100 **ಟೋಲ್‌ಫ್ರೀ ಸಂ**:1800 425 5218, Fax: 2510515
**ಈಮೇಲ್**: director@aiishmysore.in **ವೆಬ್‌ಸೈಟ್** www.aiishmysore.in
**ಕೆಲಸದ ವೇಳೆ: ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.30ರ ತನಕ**
**ಸೋಮವಾರದಿಂದ ಶುಕ್ರವಾರ, ಹಾಗೂ ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ**



ಅಭಿವೃದ್ಧಿ: ದೇವಿ, ಎನ್, ವಿವೇಕ್ ಎ, ರಾಜಲಕ್ಷ್ಮೀ ಆರ್
ವಿನ್ಯಾಸ: ದೇವಿ, ಎನ್
ಅನುವಾದ: ರಾಜಲಕ್ಷ್ಮೀ ಆರ್, ಡಾ. ರಮಾದೇವಿ ಶ್ರೀನಿವಾಸ್, ಕೆ.ಜೆ, ಮಮತಾ ಎನ್.ಎಮ್.


# ಕಿವಿಯಚ್ಚಿನ ಬಳಕೆ, ಮುನ್ನೆಚ್ಚರಿಕೆ ಹಾಗೂ ಸಂರಕ್ಷಣೆ




**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು 570 006
**ಶ್ರವಣ ವಿಜ್ಞಾನ ವಿಭಾಗ**
**(ಕಿವಿಯಚ್ಚು ವಿಭಾಗ)**

## ಕಿವಿಯಚ್ಚಿನ ಬಳಕೆ, ಮುನ್ನೆಚ್ಚರಿಕೆ ಹಾಗೂ ಸಂರಕ್ಷಣೆ

ಕಿವಿಯಚ್ಚು ಪ್ಲಾಸ್ಟಿಕ್ ಅಥವಾ ಸಿಲಿಕಾನ್‌ನಿಂದ ಮಾಡಲ್ಪಟ್ಟ ಕಿವಿಯಲ್ಲಿರಿಸುವ ಒಂದು ಸಾಧನ. ಕಿವಿಯಚ್ಚು, ವರ್ಧಿಸಿದ ಶಬ್ದವನ್ನು ಶ್ರವಣೋಪಕರಣದ ರಿಸೀವರಿನಿಂದ ಕಿವಿಯನಾಳಕ್ಕೆ ಹಾಗೂ ಕಿವಿಯ ತಮಟೆಗೆ ರವಾನಿಸುತ್ತದೆ.

**ಕಿವಿಯಚ್ಚುಗಳ ರಕ್ಷಣೆ:**

ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಿವಿಯಚ್ಚುಗಳನ್ನು ರಕ್ಷಿಸಿಕೊಳ್ಳಬೇಕು.

1. ಕಿವಿಯಚ್ಚು ಕಳೆದುಹೋಗದಂತೆ, ತುಂಡಾಗದಂತೆ, ಉಷ್ಣತೆ ಅಥವಾ ರಾಸಾಯನಿಕ ವಸ್ತುಗಳಿಂದ ಹಾನಿಯಾಗದಂತೆ ಮುಂಜಾಗರೂಕತೆ ವಹಿಸುವುದು ಅಗತ್ಯ.
2. ರಿಸೀವರಿನಿಂದ ಕಿವಿಯಚ್ಚನ್ನು ಬೇರ್ಪಡಿಸಿ, ಬೆಚ್ಚಗಿನ ಸಾಬೂನು ನೀರಿನಿಂದ ಆಗಾಗ ಸ್ವಚ್ಛಗೊಳಿಸಬೇಕು.
3. ಕಿವಿಯ ಹಿಂದುಗಡೆ ಧರಿಸುವ ಶ್ರವಣೋಪಕರಣಗಳ ಜೊತೆ ಉಪಯೋಗಿಸುವ ಕಿವಿಯಚ್ಚುಗಳನ್ನು ಟ್ಯೂಬಿನಿಂದ ಪ್ರತ್ಯೇಕಗೊಳಿಸಿ ಸ್ವಚ್ಛಗೊಳಿಸಬೇಕು.
4. ಸ್ವಚ್ಛಗೊಳಿಸಿದ ಕಿವಿಯಚ್ಚುಗಳನ್ನು ರಿಸೀವರಿನೊಂದಿಗೆ ಅಳವಡಿಸುವ ಮುನ್ನ ಕಿವಿಯಚ್ಚಿನಲ್ಲಿ ನೀರಿನ ಅಂಶ ಇಲ್ಲದಂತೆ ಸಂಪೂರ್ಣವಾಗಿ ಒಣಗಿಸಿ
5. ಪದೇ ಪದೇ ಕಿವಿಯಚ್ಚನ್ನು ರಿಸೀವರಿನಿಂದ ಬೇರ್ಪಡಿಸಬಾರದು. ಏಕೆಂದರೆ, ಕಿವಿಯಚ್ಚಿನ ಸ್ಪ್ರಿಂಗ್ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಹಾಗಿದ್ದರೂ ಸಹ ಕಿವಿಯಚ್ಚನ್ನು ಸ್ವಚ್ಛಗೊಳಿಸುವ ಮುನ್ನ ರಿಸೀವರಿನಿಂದ ಬೇರ್ಪಡಿಸಿರಿ.
6. ಕಿವಿಯಚ್ಚಿನ ನಾಳದಲ್ಲಿ ಗುಗ್ಗೆ, ಕೊಳೆ ಮುಂತಾದವು ಸೇರದಂತೆ ಎಚ್ಚರ ವಹಿಸಬೇಕು. ಇದರಿಂದ ಶ್ರವಣೋಪಕರಣದಿಂದ ಕೀರಲು ಧ್ವನಿ ಬರಲು ಕಾರಣವಾಗುತ್ತದೆ ಹಾಗೂ ಶಬ್ದ ಹಾದು ಹೋಗಲು ಅಡ್ಡಿಯುಂಟಾಗುತ್ತದೆ.
7. ಮಕ್ಕಳಲ್ಲಿ ಉಪಯೋಗಿಸುತ್ತಿರುವ ಕಿವಿಯಚ್ಚು ಸಡಿಲವಾದಾಗಲೆಲ್ಲಾ ಹೊಸ ಕಿವಿಯಚ್ಚನ್ನು ಮಾಡಿಸಬೇಕು.
8. ವೃದ್ಧರಿಗೂ ಕೂಡ ಕಿವಿಯಚ್ಚನ್ನು ಮತ್ತೆ ಮತ್ತೆ ಮಾಡಿಸುವ ಅಗತ್ಯವಿರುತ್ತದೆ. ಏಕೆಂದರೆ, ವಯಸ್ಸಾದಂತೆ ಕಿವಿ ಸುಕ್ಕುಗಟ್ಟುತ್ತದೆ ಮತ್ತು ಕಿವಿಯ ನಾಳ ಮುದುರಿಕೊಳ್ಳುತ್ತದೆ.
9. ಕಿವಿಯಚ್ಚಿನ ಅಗತ್ಯವಿದ್ದಾಗ, ಆ ವ್ಯಕ್ತಿಯು ಖುದ್ದಾಗಿ ಬಂದು ಕಿವಿಯ ಅಳತೆಕೊಟ್ಟು, ಹೊಸ ಕಿವಿಯಚ್ಚನ್ನು ಮಾಡಿಸಿಕೊಳ್ಳಬೇಕಾಗುತ್ತದೆ.
10. ಕಿವಿಯಚ್ಚನ್ನು ಶ್ರವಣೋಪಕರಣದ ರಿಸೀವರಿನೊಂದಿಗೆ ಸೇರಿಸುವಾಗ ಮತ್ತು ಬೇರ್ಪಡಿಸುವಾಗ, ಶ್ರಣೋಪಕರಣವನ್ನು ಸ್ವಿಚ್ ಆಫ್ ಮಾಡಿರಬೇಕು ಮತ್ತು ಶಬ್ದ ನಿಯಂತ್ರಣ ಕಡಿಮೆ ಮಟ್ಟದಲ್ಲಿದೆ ಎಂದು ಖಾತರಿ ಪಡಿಸಿಕೊಳ್ಳಬೇಕು.
11. ಕಿವಿಯಚ್ಚಿನಿಂದ ರಿಸೀವರಿನ ಮೇಲೆ ಹೆಚ್ಚು ಒತ್ತಡ ಕೊಡಬೇಡಿ. ಇದರಿಂದ ರಿಸೀವರಿಗೆ ಹಾನಿಯಾಗಬಹುದು.

**ಮುನ್ನೆಚ್ಚರಿಕೆ:**

1. ಶ್ರವಣೋಪಕರಣ ಮತ್ತು ಕಿವಿಯಚ್ಚನ್ನು ಉಪಯೋಗಿಸುವ ಮುನ್ನ, ಕಿವಿ ಸೋರುವಿಕೆ, ಗುಗ್ಗೆ ಮತ್ತು ಯಾವುದಾದರೂ ತೊಂದರೆಗಳಿದ್ದರೆ, ಕಿವಿ, ಮೂಗು, ಗಂಟಲು ತಜ್ಞರಿಂದ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.
2. ಶ್ರವಣೋಪಕರಣವನ್ನು ಪಡೆಯುವಾಗ ಅದರ ಜೊತೆಯಲ್ಲಿ ಪ್ಲಾಸ್ಟಿಕ್ ಇಯರ್ ಟಿಪ್ಸ್ ದೊರೆಯುತ್ತವೆ. ಶ್ರವಣೋಪಕರಣವನ್ನು ಉಪಯೋಗಿಸುವವರ ಕಿವಿ ಅಳತೆ ತೆಗೆದು ಮಾಡಿದ ಕಿವಿಯಚ್ಚುಗಳು ಸಿದ್ಧವಾಗುವವರೆಗೆ ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಇಯರ್ ಟಿಪ್ಸ್‌ಗಳನ್ನು ಉಪಯೋಗಿಸಬಹುದು.
3. ಪ್ಲಾಸ್ಟಿಕ್ ಇಯರ್ ಟಿಪ್ಸ್‌ಗಳಲ್ಲಿ ಎರಡು ಭಾಗಗಳಿರುತ್ತವೆ. ಕಿವಿಯಚ್ಚುಗಳನ್ನು ಶ್ರವಣೋಪಕರಣದ ರಿಸೀವರಿಗೆ ಅಳವಡಿಸುವ ಮೊದಲು, ಇಯರ್ ಟಿಪ್ಸ್‌ನ ಎರಡೂ ಭಾಗಗಳನ್ನು ತೆಗೆಯಬೇಕು.
4. ಮಣ್ಣು, ಮರಳು, ಸಣ್ಣ ಕಡ್ಡಿಗಳನ್ನು ಆಟಕ್ಕಾಗಿ ಕಿವಿಯಚ್ಚಿನೊಳಗೆ ಮಕ್ಕಳು ಹಾಕದಂತೆ ಎಚ್ಚರ ವಹಿಸಬೇಕು.
5. ಬಲಕಿವಿಯಚ್ಚು ಎಡಕಿವಿಗೆ, ಎಡಕಿವಿಯಚ್ಚು ಬಲಕಿವಿಗೆ ಹೊಂದುವುದಿಲ್ಲ. ಆದ್ದರಿಂದ ಪ್ರತಿಯೊಂದು ಕಿವಿಗೂ ಬೇರೆ ಬೇರೆ ಕಿವಿಯಚ್ಚನ್ನು ಮಾಡಿಸಬೇಕು.
6. ಮಕ್ಕಳು / ಶ್ರವಣೋಪಕರಣ ಉಪಯೋಗಿಸುವವರು ಕಿವಿಯಚ್ಚು ಉಪಯೋಗಿಸಿದ ನಂತರ, ಚರ್ಮದ ತುರಿಕೆ ಹಾಗೂ ಗುಳ್ಳೆಗಳು ಕಾಣಿಸಿಕೊಂಡಲ್ಲಿ, ತಕ್ಷಣ ಕಿವಿ, ಮೂಗು, ಗಂಟಲು ತಜ್ಞರಿಂದ ಚಿಕಿತ್ಸೆ ಪಡೆಯಬೇಕು.
7. ಕಿವಿ ನೋವು, ಸೋರುವಿಕೆ, ತಲೆಸುತ್ತು ಕಾಣಿಸಿಕೊಂಡಲ್ಲಿ ಕಿವಿ, ಮೂಗು, ಗಂಟಲು ತಜ್ಞರಿಂದ ಸಲಹೆ ಪಡೆಯಿರಿ.